## ಕಹೀ ಕಹೀ

ಪರಮೇಶಿ ಹೆಂಡತಿ ವನಜಾಕ್ಷಿಗೆ ಒಂದು ಪೆಗ್ ವಿಸ್ಕಿ ಹಾಕಿಕೊಟ್ಟ. ಅವಳು ಅದನ್ನು ಕುಡಿದು ನೋಡಿ, 'ಥೂ ಥೂ... ಎಷ್ಟು ಒಗರು ಒಗರಾಗಿದೆಯಲ್ರಿ... ಇದಕ್ಕಿಂತ ನಾವು ಕುಡಿಯುವ ಹಣ್ಣಿನ ಜ್ಯೂಸೇ ಎಷ್ಟು ರುಚಿಯಾಗಿರುತ್ತೆ ಗೊತ್ತಾ?' ಎಂದಳು. 'ಹೌದು ಕಣೆ, ನಿನಗೂ ಇದು ಅರ್ಥ ಆಗಲಿ ಅಂತನೇ ಹಾಕಿಕೊಟ್ಟಿದ್ದು. ನೋಡು, ನಾನು ದಿನಾ ಹೀಗೆ ಕಷ್ಟಪಟ್ಟು, ಇಷ್ಟು ಕಹಿ ಕಹಿಯಾಗಿರೋದನ್ನ ಕುಡಿದು ಬರ್ತೀನಿ, ಮತ್ತೆ ನೀ ಬೇರೆ ಬೈಯ್ತೀಯಾ. ನೀನು ಅಷ್ಟು ರುಚಿರುಚಿಯಾಗಿರೊ ಹಣ್ಣಿನ ಜ್ಯೂಸ್ ಕುಡಿದು ಆರಾಮಾಗಿರ್ತೀಯ' ಎಂದ. ವನಜಾಕ್ಷಿಗೆ ಪರಮೇಶಿಯ ಬಗ್ಗೆ ಕನಿಕರ ಬಂತು, 'ಇನ್ಮೇಲೆ ಬೈಯಲ್ಲ ರೀ' ಎಂದಳು.

**ಅನುಪಮಾ ವಿ.ಎಸ್.**





ಕಲೆ: ಗಣೇಶ ಆಚಾರ್ಯ

## ರೆಡ್‌ಬಸ್

ಅಶ್ವಿನಿ ಅಂದು ತವರಿಗೆ ಹೊರಡಬೇಕಿತ್ತು. ಗಂಡ ವಿನಾಯಕ ಅವಳನ್ನು ಬಸ್ಸು ಹತ್ತಿಸಲು ಬಂದಿದ್ದ. ಬಸ್ಸು ಬಂದು ಮುಂದೆ ನಿಂತರೂ ಅಶ್ವಿನಿ ಬಸ್ಸು ಹತ್ತಲು ತಯಾರಿರಲಿಲ್ಲ. 'ಇದೇ ಬಸ್ಸು ಕಣೆ... ನಂಬರ್ ನೋಡಿದಿನಿ, ಹತ್ತು' ಎಂದ ವಿನಾಯಕ. ಅಶ್ವಿನಿ, 'ಅಲ್ಲ ಕಣೋ, ನಾನು ರೆಡ್‌ಬಸ್ ಡಾಟ್ ಕಾಮ್‌ನಲ್ಲಿ ಬುಕ್ ಮಾಡಿದ್ದು... ಇದು ಬ್ಲೂ ಇದೆ?' ಎಂದಳು. 'ಕರ್ಮ... ನಮ್ಮಮ್ಮ ಬಡ್ಕೊಂಡ್ಳು ಕಣೆ, ಜನರಲ್ ನಾಲೇಡ್ಜ್ ಇರೋಳನ್ನ ಮದುವೆ ಆಗೊ ಅಂತ... ನಾನೇ ಪ್ರೀತಿ–ಪ್ರೇಮ ಅಂತ ನಿನ್ನ ಕಟ್ಕೊಂಡೆ... ಇದೇ ಬಸ್ಸು ಕಣೆ, ಹತ್ತು ಮೊದಲು' ಎಂದ ವಿನಾಯಕ.

**ಜ್ಯೋತಿ ಪರಬತ್**